ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/34/2015-16. ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಡಿ.ಭೀಮಪ್ಪ ತಂದೆ ಲೇಟ್ ಡಿ.ಕೊಟ್ರಪ್ಪ<br>2)ಡಿ.ಶೇಖರಪ್ಪ ತಂದೆ ಲೇಟ್ ಡಿ.ಕೊಟ್ರಪ್ಪ<br>ಕೆರೆಕಾವಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೂಡ್ಲಿಗಿ |
| ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 8/1. 8ಬಿ. ವಿಸ್ತೀರ್ಣ 0-64. 0-88. ಸೆಂಟ್ಸು ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 8/1. 8ಬಿ. ವಿಸ್ತೀರ್ಣ 0-64. 0-88. ಸೆಂಟ್ಸು ಜಮೀನುಗಳನ್ನು ಸದರಿ ತಾಲೂಕು ಕೆರೆಕಾವಲರಹಟ್ಟಿ ಗ್ರಾಮದ ಡಿ.ಭೀಮಪ್ಪ ತಂದೆ ಲೇಟ್ ಡಿ.ಕೊಟ್ರಪ್ಪ. ಡಿ.ಶೇಖರಪ್ಪ ತಂದೆ ಲೇಟ್ ಡಿ.ಕೊಟ್ರಪ್ಪ. ಇವರು ದಿನಾಂಕ 17-03-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮ್ಮನಕೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 06-06-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಪಾಲು ವಿಭಾಗ ಪತ್ರಕ್ಕೂ ಹಾಗೂ ಚೆಕ್‌ಲಿಸ್ಟೀಗೂ ತಾಳೆಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 27/2014-15. ದಿನಾಂಕ 07-07-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 19-08-2015. ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಅಮ್ಮನಕೇರಿ ಗ್ರಾಮದ ಸನಂ 8/1. 8ಬಿ. ವಿಸ್ತೀರ್ಣ 0-64. 0-88. ಸೆಂಟ್ಸು ಜಮೀನುಗಳು ನಮ್ಮ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ನಾವುಗಳು ಸದರಿ ಜಮೀನುಗಳನ್ನು ದಿನಾಂಕ 17-03-2015 ರಂದು ಪಾಲು ವಿಭಾಗ ಪತ್ರ ಬರೆಯಸಿರುತ್ತೇವೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅಳತೆ ಮಾಡಿಸಿ 11ಇ.ನಕ್ಷೆಯನ್ನು ಪಡೆದಿರುತ್ತೇವೆ. ಕಾರಣ ಸದರಿ ಪಾಲು ವಿಭಾಗ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಹೇಳಿಕೆಗಳನ್ನು ಕೇಳಿ ಎರಡನೇ ಅರ್ಜಿದಾರರಾದ ಡಿ.ಶೇಖರಪ್ಪ ತಂದೆ ಲೇಟ್ ಡಿ.ಕೊತ್ಲಪ್ಪ ಇವರು ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಒಪ್ಪಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 8/1. 8ಬಿ. ವಿಸ್ತೀರ್ಣ 0-64. 0-88. ಸೆಂಟ್ಸು ಜಮೀನುಗಳನ್ನು ದಿನಾಂಕ **17-03-2015** ರ ಪಾಲು ವಿಭಾಗದ ಪತ್ರ ಹಾಗೂ 11ಇ.ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | ಡಿ.ಭೀಮಪ್ಪ ತಂದೆ ಲೇಟ್ ಡಿ.ಕೊತ್ಲಪ್ಪ | 8/1.<br>8ಬಿಪೈಕಿ. | 0-64.<br>0-11. |
| 2 | ಡಿ.ಶೇಖರಪ್ಪ ತಂದೆ ಲೇಟ್ ಡಿ.ಕೊತ್ಲಪ್ಪ | 8ಬಿಪೈಕಿ. | 0-77 |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಸೀಲ್ದಾರರು. ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಡಿ.ಭೀಮಪ್ಪ ತಂದೆ ಲೇಟ್ ಡಿ.ಕೊತ್ಲಪ್ಪ ಡಿ.ಶೇಖರಪ್ಪ ತಂದೆ ಲೇಟ್ ಡಿ.ಕೊತ್ಲಪ್ಪ ಕೆರೆಕಾವಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೂಡ್ಲಿಗಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಚೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಚೇರಿ
ಕೂಡ್ಲಿಗಿ.